**ಸಕ್ಕರೆ**

* ಬ್ರೆಜಿಲ್‌ನ ದಕ್ಷಿಣ ಮಧ್ಯ ಪ್ರಾಂತ್ಯದ ಈಗ ಪ್ರಾರಂಭವಾಗುತ್ತಿರುವ 2016–17 ಸೀಜನ್‌ನ ಸಕ್ಕರೆ ಉತ್ಪಾದನೆ 11 ಶೇಕಡಾ ಹೆಚ್ಚಳವಾಗಿ 3432 ಮಿಲಿಯನ್ ಟನ್‌ಗಳಾಗಬಹುದೆಂದು ಆ ದೇಶದ ಬೆಳೆ ಪೂರೈಕೆ ಏಜೆನ್ಸಿ ಕನೊಬ್ ಹೇಳಿದೆ. ಕನೋಬ್‌ನ ಅಂಕಿ ಅಂಶಗಳು, ಸಕ್ಕರೆ ವ್ಯಾಪಾರಿ ವಲಯದ ಕಾರ್ನಿಕೋನ್ ಮುಂಚಿತ ಅಂದಾಜು ವರದಿಗಿಂತ 220000 ಟನ್ ಹೆಚ್ಚು ಉತ್ಪಾದನೆಯಾಗಬಹುದೆನ್ನಲಾಗಿದೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಹೆಚ್ಚಳವಾಗಿರುವುದರಿಂದ ಉತ್ಪಾದನೆ ಹೆಚ್ಚಳವಾಗಿದೆಯೆನ್ನಲಾಗಿದೆ. ಅಂತಾರಾಷ್ಟ್ರೀಯ ಸಕ್ಕರೆ ದರ ಹೆಚ್ಚಳದಿಂದ ಪ್ರೇರಿತವಾಗಿರುವ ಉತ್ಪಾದಕರು ಇಥೆನಾಲ್ ಉತ್ಪಾದನೆಗಿಂತ ಸಕ್ಕರೆ ಉತ್ಪಾದನೆಯತ್ತ ಆಸಕ್ತಿ ನಡೆಸಿರುವುದು, ಸಕ್ಕರೆ ಉತ್ಪಾದನೆ ಹೆಚ್ಚಳಕ್ಕೆ ಕಾರಣವಾಗಲಿದೆಯೆನ್ನಲಾಗಿದೆ.

**ಬೇಳೆಕಾಳುಗಳು**

* ಮುಂಬಯಿಯಲ್ಲಿ ಆಮದಿತ ಮಸೂರ್, ತೊಗರಿ, ಕಡ್ಲೆ ದರಗಳ ಗಳಿಕೆ ಮುಂದುವರಿಕೆ
* ದೆಹಲಿಯಲ್ಲಿ ಕಚ್ಚಾ ಬೇಳೆಕಾಳು ದರಗಳು ದೆಹಲಿಯಲ್ಲಿ ಹೆಚ್ಚಳ
* ಕಾನ್ಪುರ, ಇಂದೋರ್, ಮುಂಬಯಿಗಳಲ್ಲಿ ಬೇಳೆಕಾಳು ದರ ಉತ್ತಮ
* ಮಹಾರಾಷ್ಟ್ರದಲ್ಲಿ ಬೇಳೆಕಾಳು ದರ ಪ್ರಬಲ, ಜೈಪುರದಲ್ಲಿ ಬಿಳಿ ಬಟಾಣಿ ದರ ರೂ. 50 ಹೆಚ್ಚಳ
* ವ್ಯಾಪಾರಿಗಳಿಂದ ಹಾಗೂ ಮಿಲ್‌ಗಳ ಪ್ರಬಲ ಬೇಡಿಕೆಯಿಂದ ಕಾನ್ಪುರದಲ್ಲಿ ಕಚ್ಚಾ ಬೇಳೆಕಾಳು ದರಗಳು ತೀವ್ರ ಹೆಚ್ಚಳವಾಗಿವೆ. ಮಧ್ಯ ಪ್ರದೇಶ ಸ್ಥಳೀಯ ದೇಶೀ ತೊಗರಿ ದರಗಳು ಹೆಚ್ಚಳವಾಗಿವೆ.

**ಆಹಾರ ಧಾನ್ಯಗಳು**

* ಉತ್ತರ ಪ್ರದೇಶದಲ್ಲಿ ಗೋಧಿ ದರ ಮಿಶ್ರಪ್ರತಿಕ್ರಿಯೆ, ಪಂಜಾಬ್, ಹರ್ಯಾನಾಗಳಲ್ಲಿ ಗೋಧಿ ದರ ಸ್ಥಿರ
* ಅಕ್ಕಿ, ಭತ್ತ ದರ ಪ್ರಮುಖ ಮಾರುಕಟ್ಟೆಗಳಲ್ಲಿ ಸ್ಥಿರ

**ಖಾದ್ಯತೈಲಗಳು**

* ತಮಿಳ್ನಾಡು, ದೆಹಲಿಗಳಲ್ಲಿ ಖಾದ್ಯತೈಲ ದರ ಸ್ಥಿರ, ಆಂಧ್ರಪ್ರದೇಶದಲ್ಲಿ ದುರ್ಬಲ
* ಗುಜರಾತ್, ಮಹಾರಾಷ್ಟ್ರಗಳಲ್ಲಿ ಖಾದ್ಯತೈಲ ದರ ಪ್ರಬಲ

**ತೈಲ ಬೀಜಗಳು**

* ಜೈಪುರದಲ್ಲಿ ಸಾಸಿವೆ ದರ ಹೆಚ್ಚಳ
* ಇಂದೋರ್‌ನಲ್ಲಿ ಸೋಯಾಬೀನ್ ದರ ಸ್ಥಿರ

**ಮಸಾಲೆ ಪದಾರ್ಥಗಳು**

* ಕೊಚ್ಚಿನ್‌ನಲ್ಲಿ ಕಾಳುಮೆಣಸು ಪೂರೈಕೆ ಬಿಗುವಿರುವುದರಿಂದ ದರ ಉತ್ತಮ ಸ್ಥಿತಿಯಲ್ಲಿ
* ದೆಹಲಿಯಲ್ಲಿ ಏಲಕ್ಕಿ ದರ ರೂ.20 ಹೆಚ್ಚಳ
* ಕೊತ್ತಂಬರಿ, ಜೀರಿಗೆ, ಕೆಂಪು ಮೆಣಸು ದರಗಳು ಸ್ಥಿರ